


## ವೇದಿಕೆಗೆ ತಕ್ಕಂತೆ ವಾದದ ಸ್ವರೂಪ

ವಾದಗಳನ್ನು ವೈಯಕ್ತಿಕವಾಗಿ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಮುಖಾಮುಖಿಯಾಗಿ ಮಾಡಿದರೆ ದೊರೆಯುವ ಅಂತ್ಯಗಳಿಗೂ, ಟೀವಿಯಲ್ಲಿ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಮಾಡುವ ವಾದಗಳಿಗೂ, ವರ್ಚುವಲ್ ವಾದಗಳಲ್ಲಿ ತೊಡಗಿದಾಗ ತಲುಪುವ ತೀರ್ಮಾನಕ್ಕೂ ಮತ್ತು ಗೊತ್ತಿಲ್ಲದವರೊಡನೆ ಸಾಮಾಜಿಕ ಜಾಲತಾಣಗಳಲ್ಲಿ ಮಾಡುವ ವಾದಗಳ ಕೊನೆಗೂ ಬಹಳ ಅಂತರವಿರುತ್ತದೆ ಎಂಬುದನ್ನು ಗಮನಿಸಿ. ಒಬ್ಬನೇ ವ್ಯಕ್ತಿ ಭಿನ್ನ ಭಿನ್ನ ವೇದಿಕೆಯಲ್ಲಿ ಬೇರೆ ರೀತಿಯಲ್ಲಿ ವಾದ ಹೂಡುವುದನ್ನು ಕೂಡ ನಾವು ಕಾಣಬಹುದು. ಅಂದರೆ ಮಾಧ್ಯಮವೂ ವಾದದ ಸ್ವರೂಪವನ್ನು ನಿರ್ಣಯಿಸುತ್ತದೆ ಎಂದಾಯಿತಲ್ಲವೇ?

ಆರಿಸಿಕೊಳ್ಳುವ ವಿಚಾರಗಳು, ಭಾಗವಹಿಸುವವರು, ಸಮಯದ ಮಿತಿ ಮತ್ತು ಸಾಮಾಜಿಕ ಅಭಿಪ್ರಾಯಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಮುಖಾಭಿಪ್ರಾಯಗಳಿಗೆ ಬೆಲೆ ಕೊಟ್ಟು ಮಾಡುವ ವಾದಗಳು ಮತ್ತಷ್ಟು ವಾದಗಳನ್ನು ಹುಟ್ಟುಹಾಕಬಲ್ಲವು.

ಇದೇ ಕಾರಣಕ್ಕೆ ವೈಯಕ್ತಿಕವಾಗಿ ನಾವು ಸತ್ಯವನ್ನು ಅರಿಯಲು ಬಯಸುವ ವಿಚಾರಗಳ ಹೊರತಾಗಿ ಇತರೆ ವಾದಗಳಲ್ಲಿ ತೊಡಗಿಕೊಳ್ಳುವ ಅಗತ್ಯವಿರುವುದಿಲ್ಲ. ವಾದದ ಮೂಲ ವಿಚಾರ ವಸ್ತುನಿಷ್ಟವಾಗಿದ್ದಷ್ಟೂ ವಾದಗಳ ಸತ್ಯದ ಆಯಾಮಕ್ಕೆ ಹೆಚ್ಚು ಮೆರುಗಿರುತ್ತದೆ.

## ವಾದ ಅನಾರೋಗ್ಯಕರವೇ?

ವಾದಗಳು ಅನಾರೋಗ್ಯಕರ ಎಂದಾಗಿದ್ದರೆ ಈ ವೇಳೆಗೆ ವಾದಗಳನ್ನು ಅಪರಾಧ ಎಂದು ಗುರುತಿಸಿ ಅವುಗಳನ್ನು ತಡೆಯಲು ಕಾನೂನು ಕ್ರಮಗಳನ್ನು ಜಾರಿಗೆ ತರುತ್ತಿದ್ದೇವೇನೋ? ಶಾಲೆ–ಕಾಲೇಜುಗಳಲ್ಲಿ ವಾದಗಳನ್ನು ಖಂಡಿಸಿರುತ್ತಿದ್ದೇವೇನೋ? ಈ ವರ್ಷ 'ವಾದಗಳ ಸಂಭವಿಸುವಿಕೆ ಶೇಕಡಾ ಇಂತಿಷ್ಟು ಕಡಿಮೆಯಾಗಿದೆ' ಎನ್ನುವ ವಿಚಾರವನ್ನು ಸುದ್ದಿ ಮಾಡಿ ಬಿತ್ತರಿಸುತ್ತಿದ್ದೇವೇನೋ?

ವಾದಗಳು ಅವುಗಳ ಮೂಲರೂಪದಲ್ಲಿ, ಆಡುಭಾಷೆಯಲ್ಲಿ, ಅತ್ಯಂತ ತಾರ್ಕಿಕವಾಗಿಯಲ್ಲದಿದ್ದರೂ ಅವರವರ ಅರಿವಿಗೆ ತಕ್ಕಂತೆ ನಡೆಯುವುದೇ ಆರೋಗ್ಯಕರ ಸಮಾಜದ ಲಕ್ಷಣವಾಗಿದೆ.

ಯಾವುದೇ ವಿಚಾರಗಳ ಬಗ್ಗೆ ಅಭಿಪ್ರಾಯಗಳು ಮೂಡುವುದು ಅತ್ಯಂತ ಸಹಜ ಪ್ರಕ್ರಿಯೆ. ಭಿನ್ನಾಭಿಪ್ರಾಯಗಳು ಮೂಡಿದ ಕೂಡಲೇ ಅದಕ್ಕೆ ತಕ್ಕನಾದ ಮತ್ತು ಪೂರಕವಾದ ವಾದಗಳೂ ಮೂಡುತ್ತವೆ. ಆದರೆ ಅಭಿಪ್ರಾಯಗಳು ಎಲ್ಲರಲ್ಲೂ ಏಕಪ್ರಕಾರ ಮೂಡುವುದಿಲ್ಲ. ನಮ್ಮ ಮಿದುಳಿನಲ್ಲಿ ಮೂಡುವ ಕಾರಣಗಳನ್ನು ಒಪ್ಪಿದ ನಂತರವೇ ನಾವು ನಮ್ಮ ಅಭಿಪ್ರಾಯಗಳಿಗೆ ಬೆಲೆಕೊಡುತ್ತೇವೆ. ಆ ಕಾರಣ ನಮ್ಮ ಅಭಿಪ್ರಾಯಗಳು ಏಕೆ ನಿಜ ಎಂದು ಇತರರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತೇವೆ. ಅದನ್ನೇ ವಾದ ಎನ್ನುತ್ತೇವೆ. ಹಾಗಾಗಿ ವಾದ ಮಾಡುವುದು ಅತ್ಯಂತ ಸಹಜ; ಅದು ಅನಾರೋಗ್ಯಕರ ಹೇಗಾದೀತು?

'ವಾದಗಳು ಬದುಕಿಗೆ ಅತ್ಯಂತ ಮುಖ್ಯ' ಎನ್ನುತ್ತಾರೆ ಸಾಮಾಜಿಕ ತಜ್ಞರು. ಉಪಯೋಗವಾಗುವಂತಹ ಅಥವಾ ಆರೋಗ್ಯಕರ ರೀತಿಯ ಅಸಮ್ಮತಿಯನ್ನು ತೋರಿವುದು ಅತ್ಯಂತ ಉಪಯುಕ್ತ ಎನ್ನುವುದು ಅವರ ನಿಲುವು. ಅಸಮ್ಮತಿ ಅಥವಾ ಭಿನ್ನಾಭಿಪ್ರಾಯಗಳಿಲ್ಲದಿದ್ದರೆ ಯಾವುದೇ ವಿಚಾರ ಅರಳಲು, ಹಲವು ಆಯಾಮಗಳನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಅಂದಹಾಗೆ? ನೀವು ಭಾಗಿಯಾದ ಕೊನೆಯ ವಾದ–ಸಂವಾದ ಯಾವುದು? ವಾದಕ್ಕೆ ಕೊನೆಯೆಂಬುದುಂಟೆ? ಟೀವಿ ವಾಹಿನಿಯೊಂದರ ಬಗ್ಗೆಯೋ, ಪತ್ರಿಕೆಗಳಲ್ಲಿ ಓದಿದ ವಿಚಾರದ ಬಗ್ಗೆಯೋ, ಈಗ ತಾನೇ ತಿಂದ ತಿಂಡಿಯ ರುಚಿಯ ಬಗ್ಗೆಯೋ, ಹಣಕಾಸಿನ ವಿಚಾರದ ಬಗ್ಗೆಯೋ, ರಾಜಕೀಯ ಅಥವಾ ಆಟೋಟಗಾರರ ಬಗ್ಗೆಯೋ, ಸಿನಿಮಾದ ಬಗ್ಗೆಯೋ ನಾವು ವಾದ ಮಾಡಿರುತ್ತೇವೆ, ಮಾಡುತ್ತಲೇ ಇರುತ್ತೇವೆ. ಆ